## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 616(698) |
| ಸದಸ್ಯರ ಹೆಸರು | ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : 11.12.2023 |
| ಉತ್ತರಿಸಬೇಕಾದ ಸಚಿವರು | : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಮಕ್ಕಳನ್ನು ಪೂರ್ಣ ಪ್ರಾಥಮಿಕ ಶಾಲೆಗೆ ದಾಖಲು ಮಾಡಲು ಇರುವ ವಯೋಮಿತಿಯೇನು; (ಆದೇಶದ ಪ್ರತಿಯನ್ನು ಒದಗಿಸುವುದು) | ಆರ್.ಟಿ.ಇ ಕಾಯಿದೆ 2009 ಮತ್ತು ಕಡ್ಡಾಯ ಶಿಕ್ಷಣ ನಿಯಮಗಳು 2012ರಂತೆ ಸರ್ಕಾರದ ಆದೇಶ ಸಂಖ್ಯೆ ಇಪಿ 260 ಪಿಜಿಸಿ 2021, ದಿನಾಂಕ:26.07.2022 ಮತ್ತು ತಿದ್ದುಪಡಿ ಆದೇಶ ಸಂಖ್ಯೆ: ಇಪಿ 387 ಪಿಜಿಸಿ 2022 ದಿನಾಂಕ: 15.11.2022 ರಲ್ಲಿ "2025-26ನೇ ಶೈಕ್ಷಣಿಕ ಸಾಲಿನಿಂದ ಅನ್ವಯವಾಗುವಂತೆ" ಶೈಕ್ಷಣಿಕ ವರ್ಷದ ಜೂನ್ 1 ನೇ ತಾರೀಖಿಗೆ ಕಡ್ಡಾಯವಾಗಿ 06 ವರ್ಷಗಳು ಪೂರ್ಣಗೊಂಡಿರುವ ಮಗುವನ್ನು ಒಂದನೇ ತರಗತಿಗೆ ದಾಖಲಿಸಲು ವಯೋಮಿತಿಯನ್ನು ನಿಗಧಿಪಡಿಸಲಾಗಿದೆ.<br><br>ಅದಕ್ಕೆ ಪೂರಕವಾಗಿ, ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು ರವರು ಜ್ಞಾಪನಾ ಪತ್ರ ದಿನಾಂಕ: 27.04.2023 ರಲ್ಲಿ 2023-24ನೇ ಸಾಲಿನಿಂದ ಎಲ್.ಕೆ.ಜಿ ತರಗತಿಗೆ ದಾಖಲಾತಿ ಹೊಂದಲು ಜೂನ್ -1ನೇ ತಾರೀಖಿಗೆ ಅನ್ವಯವಾಗುವಂತೆ 04 ವರ್ಷಗಳ ವಯೋಮಿತಿಯನ್ನು ನಿಗಧಿಪಡಿಸಲಾಗಿರುತ್ತದೆ. ಈ ಆದೇಶ ಎರಡು ವರ್ಷಗಳ ನಂತರ ಜಾರಿಗೆ ಬರುತ್ತಿದ್ದು, ಇಲಾಖಾಧಿಕಾರಿಗಳ ಮೂಲಕ ಈಗಾಗಲೇ ಪೋಷಕರ ಗಮನಕ್ಕೆ ತರಲಾಗಿದೆ. ಅದಕ್ಕೆ ಪೂರಕವಾಗಿ, ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು ರವರಿಂದ 2023-24ನೇ ಸಾಲಿನಿಂದ ಎಲ್.ಕೆ.ಜಿ ತರಗತಿಗೆ ದಾಖಲಾತಿ ಹೊಂದಲು ಜೂನ್ 1ನೇ ತಾರೀಖಿಗೆ ಅನ್ವಯವಾಗುವಂತೆ 04 ವರ್ಷಗಳ ವಯೋಮಿತಿಯನ್ನು ನಿಗಧಿಪಡಿಸಿ ದಿನಾಂಕ: 27.04.2023 ರಲ್ಲಿ ಜ್ಞಾಪನ ಹೊರಡಿಸಲಾಗಿದೆ.<br><br>ರಾಜ್ಯ ಯೋಜನಾ ನಿರ್ದೇಶಕರ ದಿನಾಂಕ:27.04.2023 ರ ನಿರ್ದೇಶನವನ್ನು ಪ್ರಶ್ನಿಸಿ, |

| | | |
|---|---|---|
| | | ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ : 11173/2023 ದಾಖಲಾಗಿದ್ದು, ಮಾನ್ಯ ನ್ಯಾಯಾಲಯವು ದಿನಾಂಕ : 26/07/2023 ರಂದು ಸದರಿ ಅರ್ಜಿಯನ್ನು ವಜಾಗೊಳಿಸಿ ತೀರ್ಪು ನೀಡಿರುತ್ತದೆ. |
| ಆ) | ಮಕ್ಕಳನ್ನು ಪೂರ್ವ ಪ್ರಾಥಮಿಕ ಶಾಲೆಗೆ ದಾಖಲು ಮಾಡಲು ಜೂನ್ 1ನೇ ತಾರಿಖಿಗೆ ಕೊನೆಗೊಳಿಸಿ ಆದೇಶ ಮಾಡಿರುವುದು ಸರಿಯಷ್ಟೆ; ಇದರಿಂದಾಚೆಗೆ ಒಂದೆರಡು ವಾರಗಳಲ್ಲಿ ಜನಿಸಿರುವ ಮಕ್ಕಳನ್ನು ಪೋಷಕರು ಒಂದು ವರ್ಷ ಕಾಲ ಶಾಲೆಗೆ ಸೇರಿಸಲು ಆಗದೇ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದರಿಂದಾಗಿ ಆ ಮಗುವಿನ ಶೈಕ್ಷಣಿಕ ವಿಕಾಸಕ್ಕೆ ತೊಂದರೆಯಾಗುವುದನ್ನು ಸರ್ಕಾರವು ಗಮನಿಸಿದೆಯೇ; | ಬಂದಿದೆ.<br><br>ಆದರೆ, ಮೇಲಿನ ಮಾನ್ಯ ಉಚ್ಚ ನ್ಯಾಯಾಲಯದ ತೀರ್ಪಿನ ಹಿನ್ನೆಲೆಯಲ್ಲಿ, ಸದರಿ ಪ್ರಕರಣದಲ್ಲಿ ರಿಲಾಕ್ಸ್ ಮಾಡುವ ಯಾವುದೇ ಪ್ರಸ್ತಾವನೆ ಇರುವುದಿಲ್ಲ. |
| ಇ) | ಈ ಆದೇಶದ ಬದಲು ಇದರಲ್ಲಿ ಒಂದು ತಿಂಗಳವರೆಗೆ ರೀಲ್ಯಾಕ್ಸ್ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ? ( ವಿವರ ನೀಡುವುದು) | |

ಸಂಖ್ಯೆ: ಇಪಿ 364 ಪಿಜಿಸಿ 2023

**(ಎಸ್. ಮಧು ಬಂಗಾರಪ್ಪ)**

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.